# ಗೀತಾ ನಾಗಭೂಷಣ ಅವರ ‘ಬದುಕು’ ಕಾದಂಬರಿಯಲ್ಲಿ ದೇವದಾಸಿಯರ ಪಾತ್ರ ಚಿತ್ರಣ

**ರೇಖಾ ಬಿ.**
ಕನ್ನಡ ಸಹಾಯಕ ಪ್ರಾಧ್ಯಾಪಕರು, ಕೇಂಬ್ರಿಡ್ಜ್ ಕಾಲೇಜು, ಕೆ.ಆರ್. ಪುರಂ, ಬೆಂಗಳೂರು.

**DOI: https://doi.org/10.5281/zenodo.18699639**

## ABSTRACT:

ಕನ್ನಡ ಕಾದಂಬರಿ ಸಾಹಿತ್ಯವು ಸಮಾಜದ ವಾಸ್ತವಿಕ ಬದುಕನ್ನು ಪ್ರತಿಬಿಂಬಿಸುವಲ್ಲಿ ಮಹತ್ವದ ಪಾತ್ರವಹಿಸಿದೆ. ಅದರಲ್ಲೂ ವಿಶೇಷವಾಗಿ ಮಹಿಳೆಯರ ಬದುಕು, ಅವಳ ಆಂತರಿಕ ಸಂವೇದನೆಗಳು, ಸಂಕಟಗಳು ಮತ್ತು ಅಸ್ತಿತ್ವದ ಹೋರಾಟಗಳು ಅನೇಕ ಕಾದಂಬರಿಗಳ ಪ್ರಮುಖ ವಿಷಯಗಳಾಗಿವೆ. ‘ಬದುಕು’ ಕಾದಂಬರಿಯು ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯೊಳಗೆ ಮಹಿಳೆ ಅನುಭವಿಸುವ ನೋವು, ತ್ಯಾಗ, ಮೌನ ಮತ್ತು ಭಾವನಾತ್ಮಕ ಸಂಘರ್ಷಗಳನ್ನು ಸೂಕ್ಷ್ಮವಾಗಿ ಚಿತ್ರಿಸುತ್ತದೆ. ಗೀತಾ ನಾಗಭೂಷಣ ಅವರ ‘ಬದುಕು’ ಕಾದಂಬರಿಯಲ್ಲಿ ದೇವದಾಸಿಯರ ಪಾತ್ರ ಚಿತ್ರಣವು ಮಹಿಳಾ ಜೀವನದ ನೋವು, ಶೋಷಣೆ ಮತ್ತು ಅಸಮಾನತೆಯನ್ನು ತೀವ್ರವಾಗಿ ಅನಾವರಣಗೊಳ್ಳುತ್ತದೆ. ಧರ್ಮದ ಹೆಸರಿನಲ್ಲಿ ಸಮಾಜವು ರೂಪಿಸಿದ ದೇವದಾಸಿ ಪದ್ಧತಿ ಹೇಗೆ ಮಹಿಳೆಯರ ದೇಹ, ಮನಸ್ಸು ಮತ್ತು ಜೀವನದ ಮೇಲೆ ಸಂಪೂರ್ಣ ನಿಯಂತ್ರಣ ಸಾಧಿಸುತ್ತದೆ ಎಂಬುದನ್ನು ಕಾದಂಬರಿ ಸ್ಪಷ್ಟವಾಗಿ ಚಿತ್ರಿಸುತ್ತದೆ. ದೇವದಾಸಿಯರನ್ನು ಕೇವಲ ಧಾರ್ಮಿಕ ಸಂಪ್ರದಾಯದ ಭಾಗವೆಂದು ನೋಡದೆ, ಮಾನವೀಯತೆಯಿಂದ ವಂಚಿತಗೊಂಡ ಬದುಕುಗಳಾಗಿ ಲೇಖಕಿ ನಿರೂಪಿಸುತ್ತಾರೆ. ಪಿತೃಸತ್ತಾತ್ಮಕ ವ್ಯವಸ್ಥೆ, ಜಾತಿ ಮತ್ತು ಆರ್ಥಿಕ ಅಸಮಾನತೆಗಳು ದೇವದಾಸಿಯರ ಶೋಷಣೆಗೆ ಹೇಗೆ ಕಾರಣವಾಗುತ್ತವೆ ಎಂಬುದು ಕಾದಂಬರಿಯ ಪ್ರಮುಖ ಆಶಯವಾಗಿದೆ. ಅವರ ಒಳನೋವು, ಮೌನ ಪ್ರತಿಭಟನೆ ಮತ್ತು ಆತ್ಮಗೌರವದ ಹುಡುಕಾಟದ ಮೂಲಕ ಬದುಕು ಕಾದಂಬರಿ ಸಮಾಜದ ದ್ವಂದ್ವ ನೀತಿಯನ್ನು ಪ್ರಶ್ನಿಸಿ ಮಾನವೀಯ ಮೌಲ್ಯಗಳ ಅಗತ್ಯತೆಯನ್ನು ಒತ್ತಿ ಹೇಳುತ್ತದೆ.

## KEYWORDS:

ದೇವದಾಸಿ ಪದ್ಧತಿ, ಧರ್ಮ ಮತ್ತು ಶೋಷಣೆ, ಜಾತಿ–ಆರ್ಥಿಕ ಅಸಮಾನತೆ, ಆತ್ಮಗೌರವ.

**ಪೀಠಿಕೆ:**

ಕನ್ನಡ ಸಾಹಿತ್ಯದಲ್ಲಿ ಸಾಮಾಜಿಕ ಅಸಮಾನತೆ, ಮಹಿಳಾ ಶೋಷಣೆ ಹಾಗೂ ಪಿತೃಸತ್ತಾತ್ಮಕ ವ್ಯವಸ್ಥೆಯ ವಿಮರ್ಶೆ ಮಹತ್ವದ ಚಿಂತನೆಯಾಗಿದೆ. ವಿಶೇಷವಾಗಿ ‘ದೇವದಾಸಿ ಪದ್ಧತಿ’ ಎಂಬ ಧಾರ್ಮಿಕ–ಸಾಂಸ್ಕೃತಿಕ ಆಚರಣೆಯ ಹೆಸರಿನಲ್ಲಿ ಮಹಿಳೆಯರನ್ನು ಶೋಷಿಸುವ ಪ್ರಕ್ರಿಯೆ ಹಲವು ಸಾಹಿತ್ಯ ಕೃತಿಗಳಲ್ಲಿ ಪ್ರತಿಬಿಂಬಿಸಿದೆ. ಕರ್ನಾಟಕದಲ್ಲಿ ದೇವದಾಸಿ ಪದ್ಧತಿಯು ಶತಮಾನಗಳಿಂದ ಬೆಳಗಾವಿ, ಬಾಗಲಕೋಟೆ, ರಾಯಚೂರು, ಕೊಪ್ಪಳ ಮುಂತಾದ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ, ಮುಖ್ಯವಾಗಿ ಎಲ್ಲಮ್ಮ ಆರಾಧನೆಯ ನೆಪದಲ್ಲಿ ಬೇರೂರಿದ್ದ ಅನಿಷ್ಟ ಸಾಮಾಜಿಕ ಆಚರಣೆಯಾಗಿದೆ. ಈ ಪದ್ಧತಿ ಕಾನೂನಿನಿಂದ ನಿಷೇಧಿತವಾಗಿದ್ದರೂ, ಬಡತನ, ಮೂಢನಂಬಿಕೆ ಮತ್ತು ಸಾಮಾಜಿಕ ಒತ್ತಡದಿಂದಾಗಿ ಇದು ಇಂದಿಗೂ ಸಣ್ಣ ಪ್ರಮಾಣದಲ್ಲಿ ಮುಂದುವರಿದಿದೆ.

ಕನ್ನಡ ಕಾದಂಬರಿಗಳಲ್ಲಿ ದೇವದಾಸಿ ಪದ್ಧತಿಯನ್ನು ಒಂದು ಸಾಮಾಜಿಕ

ಅನ್ಯಾಯವಾಗಿ, ಅದರೊಳಗಿನ ಮಾನವೀಯ ಸಂಕಟಗಳೊಂದಿಗೆ ಚಿತ್ರಿಸಿರುವುದನ್ನು ಕಾಣಬಹುದು. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಕಾದಂಬರಿಗಳು ಮತ್ತು ಕಥೆಗಳಲ್ಲಿ ದೇವಾಲಯ–ಸಮಾಜ ಸಂಬಂಧಗಳ ಸನ್ನಿವೇಶಗಳಲ್ಲಿ ದೇವದಾಸಿ ಪದ್ಧತಿಯ ಛಾಯೆ ಕಾಣಿಸುತ್ತದೆ. ಶಿವರಾಮ ಕಾರಂತ ಅವರ ಕೃತಿಗಳಲ್ಲಿ (ಉದಾ: ಮೂಕಜ್ಜಿಯ ಕನಸುಗಳು, ಮೈಮನಗಳ ಸುಳಿಯಲ್ಲಿ ಮೊದಲಾದವು) ಸಮಾಜದ ಪುರಾತನ ಆಚರಣೆಗಳ ವಿಮರ್ಶಾತ್ಮಕ ಚಿತ್ರಣದೊಳಗೆ ದೇವದಾಸಿ ವ್ಯವಸ್ಥೆಯ ಸನ್ನಿವೇಶಗಳು ಬರುತ್ತವೆ. ದೇವದಾಸಿ ಪದ್ಧತಿ ಕೇವಲ ಧಾರ್ಮಿಕ ಆಚರಣೆ ಅಲ್ಲ, ಸ್ತ್ರೀ ಶೋಷಣೆ, ಜಾತಿ–ವರ್ಗವ್ಯವಸ್ಥೆ, ಪಿತೃತ್ವಾಧಾರಿತ ಸಮಾಜ ಇವುಗಳ ಸಂಕೀರ್ಣ ರೂಪವಾಗಿ ಸಾಹಿತ್ಯದಲ್ಲಿ ಮೂಡಿಬಂದಿದೆ.

ಈ ಹಿನ್ನೆಲೆಯಲ್ಲಿ ಗೀತಾ ನಾಗಭೂಷಣರ ಬದುಕು ಕಾದಂಬರಿ ದೇವದಾಸಿಯರ ಬದುಕನ್ನು ಕೇವಲ ವೈಯಕ್ತಿಕ ಕಥೆಯಾಗಿ ಅಲ್ಲದೆ, ಸಾಮಾಜಿಕ ವಾಸ್ತವದ ಪ್ರತಿನಿಧಿಯಾಗಿ ನಿರೂಪಿಸುತ್ತದೆ. ಈ ಕಾದಂಬರಿಯಲ್ಲಿ ದೇವದಾಸಿಯರ ಜೀವನವು ಧರ್ಮ, ಜಾತಿ, ಲಿಂಗ ಮತ್ತು ಆರ್ಥಿಕ ಶೋಷಣೆಗಳ ಸಂಕೀರ್ಣ ಜಾಲದಲ್ಲಿ ಸಿಲುಕಿರುವುದಾಗಿ ಚಿತ್ರಿತವಾಗಿದೆ. ದೇವದಾಸಿಯರ ದೇಹ ಮತ್ತು ಅಸ್ತಿತ್ವವನ್ನು ನಿಯಂತ್ರಿಸುವ ಸಮಾಜದ ದ್ವಂದ್ವ ನೀತಿಯನ್ನು ಲೇಖಕಿ ಕಟುವಾಗಿಯೇ ಪ್ರಶ್ನಿಸಿದ್ದಾರೆ.

**ವಿಷಯ ವಿಸ್ತರಣೆ:**

ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಯರಿಗೆ ವಿಶಿಷ್ಟ ಸ್ಥಾನವಿದೆ. ಮಹಿಳೆ ದೇಶದ ಆಸ್ತಿ ಮಾತ್ರವಲ್ಲ ಹೆಮ್ಮೆ ಕೂಡ. "ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ" ಎಂದು ಮನುಸ್ಮೃತಿಯಲ್ಲಿ ಹೆಣ್ಣನ್ನು ಕೊಂಡಾಡಲಾಗಿದೆ. 'ಮಾತೆಯಿಂ ಹಿತವರಿಲ್ಲ' ಎಂಬ ಸರ್ವಜ್ಞನ ವಚನದಂತೆ ಹೆಣ್ಣು ಮಗಳಾಗಿ, ಸೋದರಿಯಾಗಿ, ಮಡದಿಯಾಗಿ, ತಾಯಿಯಾಗಿ ಕುಟುಂಬದಲ್ಲಿನ ಅವಿಭಾಜ್ಯ ಅಂಗವಾಗಿದ್ದಾಳೆ. ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಹಿತ್ಯ ಕ್ಷೇತ್ರಗಳಲ್ಲಿ ಮಾತ್ರವಲ್ಲದೇ; ಸಾಹಸ, ಕಲೆ, ವಿಜ್ಞಾನ, ಕ್ರೀಡೆ, ಸಂಗೀತ.... ಹೀಗೆ ಸರ್ವ ಕ್ಷೇತ್ರಗಳನ್ನೂ ಮಹಿಳೆ ಪ್ರತಿನಿಧಿಸಿದ್ದಾಳೆ.

ಭಾರತೀಯ ಸಮಾಜವು ಪುರುಷ ಪ್ರಧಾನ ವ್ಯವಸ್ಥೆಯಿಂದ ಕೂಡಿದೆ. ಮಹಿಳೆಯು ಸಮಾಜದ ಜೀವನಾಡಿಯಾಗಿದ್ದರೂ, ಮಹಿಳೆಯರನ್ನು ಸಮಾಜದಲ್ಲಿ ದ್ವಿತೀಯ ದರ್ಜೆಯ ಪ್ರಜೆಯೆಂದು ಅನಾದಿಕಾಲದಿಂದಲೂ ಕಡೆಗಣಿಸಲಾಗಿದೆ. ಇಲ್ಲಿ ಪುರುಷರು ಮಹಿಳೆಯನ್ನು ಅಬಲೆಯಂತೆ ಕಾಣುತ್ತಾರೆ. ಇಂತಹ ವ್ಯವಸ್ಥೆಯಡಿಯಲ್ಲಿ ಸಿಲುಕಿದ ಮಹಿಳೆಯರು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದಾರೆ. ಹೆಣ್ಣಿಗೆ ಅಬಲೆಯ ಪಟ್ಟ ಕಟ್ಟುವುದರ ಜೊತೆಗೆ ಅವಳ ದೇಹ, ಮನಸ್ಸುಗಳ ಮೇಲೂ ಹಕ್ಕಿಲ್ಲದಂತೆ ಮಾಡಲಾಗಿದೆ. ಅದರಲ್ಲೂ ಕೆಳವರ್ಗದ ಹೆಣ್ಣು ಮಕ್ಕಳು ಅತಿ ಹೆಚ್ಚಾಗಿ ಈ ರೀತಿಯ ಶೋಷಣೆಗೆ ಒಳಗಾಗುತ್ತಾರೆ. ಪಟ್ಟ ಭದ್ರ ಹಿತಾಸಕ್ತಿಗೆ ಒಳಗಾದ ದುಷ್ಟ ಮನಸ್ಸುಗಳು ಮುಗ್ಧ ಹೆಣ್ಣು ಮಕ್ಕಳ ಬಾಳಿನಲ್ಲಿ ಆಟವಾಡುತ್ತ ಅವರ ಬದುಕನ್ನು ನಾಶ ಮಾಡುತ್ತಾರೆ.

ಹೆಣ್ಣು ಮಕ್ಕಳನ್ನು (ಮುಖ್ಯವಾಗಿ ಕೆಳಜಾತಿ/ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಂದ) ದೇವಾಲಯಕ್ಕೆ 'ಅರ್ಪಣೆ' ಮಾಡುವ ಪದ್ಧತಿಯೇ ದೇವದಾಸಿ ಪದ್ಧತಿ. ಹೆಣ್ಣು ಮಕ್ಕಳನ್ನು ದೇವರ ಸೇವೆಗೆ ಸಮರ್ಪಿಸಲಾಗಿದೆ ಎಂದು ಹೇಳಿ, ಮದುವೆ ಮಾಡದಂತೆ ಇಡಲಾಗುತ್ತಿತ್ತು. ಈ ಪದ್ಧತಿ ಎಷ್ಟು ಕ್ರೂರವಾದದ್ದು ಎಂದರೆ ಸಮಾಜದ ಆರೋಗ್ಯವನ್ನೇ ಹಾಳು ಮಾಡುವಂತಹ ಕೆಟ್ಟ ಪದ್ಧತಿ. ಆರಂಭದಲ್ಲಿ ನೃತ್ಯ, ಸಂಗೀತ, ಪೂಜೆಗಳ ಜೊತೆ

ಸಂಬಂಧಿಸಿದಂತೆ ಈ ಪದ್ಧತಿ ಇದ್ದರೂ, ಕಾಲಕ್ರಮೇಣ ಇದು ಶೋಷಣೆಯ ರೂಪ ತೆಗೆದುಕೊಂಡಿತು. ಇದು ಮಹಿಳೆಯರನ್ನು ವೇಶ್ಯಾಗಾರಿಕೆಗೆ ಇಳಿಸುವಂತಹ ಕ್ರೂರ ಪದ್ಧತಿಯಾಗಿದೆ. ಗೀತಾ ನಾಗಭೂಷಣ ಅವರು 'ಬದುಕು' ಕಾದಂಬರಿಯಲ್ಲಿ ದೇವದಾಸಿ ಮಹಿಳೆಯರ ಪಾತ್ರ ಚಿತ್ರಣವನ್ನು ಅತ್ಯಂತ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಅವರು ಅನುಭವಿಸುವ ನೋವು-ನಲಿವು, ಸುಖ-ದುಃಖವನ್ನು ಹಲವು ಪಾತ್ರಗಳ ಮೂಲಕ ಕಟ್ಟಿಕೊಟ್ಟಿದ್ದಾರೆ.

ಕಾದಂಬರಿಯಲ್ಲಿ ಮೇಲ್ವರ್ಗದವರು ಕೆಳವರ್ಗದ ಮಹಿಳೆಯರನ್ನು ಆಟಿಕೆಯ ವಸ್ತುವಾಗಿ ಬಳಸಿಕೊಳ್ಳುತ್ತಾರೆ. ಮೇಲ್ಜಾತಿಯ ಗೌಡ, ಕುಲಕರ್ಣಿಯರಿಗೆ ದಲಿತ ಮಹಿಳೆಯರು ಭೋಗದ ವಸ್ತುಗಳಾಗಿದ್ದಾರೆ. ಈ ಹೆಣ್ಣುಗಳು ಪರಿಸ್ಥಿತಿಯ ವಿರುದ್ಧ ಪ್ರತಿಭಟಿಸಲಾರದೇ ದುಷ್ಟರ, ಸ್ವಾರ್ಥಿಗಳ ಕೈಗೆ ಸಿಕ್ಕು ಬದುಕನ್ನೇ ನಾಶ ಮಾಡಿಕೊಳ್ಳುತ್ತಾರೆ. 'ಜೋಗಣಿ' ಎಂದು ಹದಿಹರೆಯದ ಹೆಣ್ಣು ಮಕ್ಕಳನ್ನು ಮದುವೆ ಮಾಡದೇ ದೇವಿಯ ಸೇವೆಗೆಂದು ಸೂಳೆಗಾರಿಕೆಗೆ ಇಳಿಸುತ್ತಾರೆ. ಇಂಥ ಅನಾಗರಿಕ, ಅಮಾನವೀಯ ಪೂಜಾರೀತಿಗಳು, ರಿವಾಜುಗಳು, ಮೇಲ್ಜಾತಿಯ ಹೆಣ್ಣು ಮಕ್ಕಳಿಗಿರಲಿಲ್ಲ. ಇದು ದಲಿತ ಮಹಿಳೆಯರಿಗೆ ಮಾತ್ರ ಸೀಮಿತವಾದ ನಿಯಮವಾಗಿತ್ತು.

ಕಾದಂಬರಿಯ ಪ್ರಮುಖ ಪಾತ್ರವಾದ 'ನೀಲವ್ವ' ಜೋಗಣಿ(ದೇವದಾಸಿ)ಯಾಗಿ ಪರಿಸ್ಥಿತಿಯ ಕೈಗೊಂಬೆಯಾಗಿ ಆತ್ಮಹತ್ಯೆ ಮಾಡಿಕೊಂಡರೆ, 'ದುರ್ಗಿ-ಮರ್ಗಿ' ಎಂಬುವರು ಜೋಗಣಿ ಧಂದೆಗೆ ತಮ್ಮನ್ನು ಒಗ್ಗಿಸಿಕೊಂಡು ಜೀವನ ಸಾಗಿಸುತ್ತಾರೆ. ತುಳಜಾ ಮಾತ್ರ ನಿಂಬೆವ್ವಾಯಿಯ ವೈಚಾರಿಕತೆಯಿಂದಾಗಿ ತನ್ನ ಮನಸ್ಸು ಬದಲಾಯಿಸಿ, ಕೆಲವು ದಿನಗಳ ನಂತರ ಸಂಸಾರ ಹೂಡಿ, ಗರತಿಯರ ಹಾಗೇ ಜೀವನ ನಡೆಸುತ್ತಾಳೆ. ಅಲ್ಲದೆ ತಂದೆ-ತಾಯಿಯರ ಆಸರೆಯಾಗಿ, ಪಂಚಾಯ್ತಿಯ ನ್ಯಾಯವನ್ನು ಒಪ್ಪದೆ ಪೂಜಾರಪ್ಪನ ಕುತಂತ್ರ ವ್ಯಭಿಚಾರವನ್ನೆಲ್ಲ ಅರಿತುಕೊಂಡು, ಅವನ ಕೇರಿಯ ಮಂದಿಗೆಲ್ಲ ತಿಳಿಸಿ ಅವರ ನ್ಯಾಯಕ್ಕೆ ದೊಡ್ಡ 'ನಮಸ್ಕಾರ' ಮಾಡಿ ತನ್ನ ಮಗು, ಪತಿ, ತಂದೆ ತಾಯಿಯೊಂದಿಗೆ ಊರನ್ನೇ ಬಿಟ್ಟು ತೆರಳುತ್ತಾಳೆ. ಈ 'ನಮಸ್ಕಾರ' ಶೋಷಿತ ವರ್ಗಕ್ಕೆ ಸವಾಲು ಎಸೆದಂತೆ ತೋರುತ್ತದೆ.

ದುರ್ಗಿ-ಮರ್ಗಿಯರು ಚುಂಚೂರಿನ ಮಾದಕೇರಿಯ ಮಾನಿಂಗಪ್ಪನ ಅವಳಿಜವಳಿ ಹೆಣ್ಣು ಮಕ್ಕಳು. ಮಾನಿಂಗಪ್ಪ-ಮಾಳವ್ವರಿಗೆ ವರ್ಷಗಳವರೆಗೆ ಮಕ್ಕಳೇ ಆಗಿರಲಿಲ್ಲ. ಮಾಪುರದೇವಿಯ ಗುಡಿಗೆ ಹೋಗಿ ಚೊಚ್ಚಲ ಹೆಣ್ಣಾದ್ರೆ ತಾಯಿ ಸೇವೆಗೆ ಜೋಗಣಿ ಬಿಡುವುದು, ಗಂಡು ಮಗುವಾದರೆ ತಮಗೆ ಇರ್ಲಿ ಎಂದು ದೇವರಿಗೆ ಹರಕೆ ಹೊತ್ತಿದ್ದರು. ದೇವರ ಆಶೀರ್ವಾದದಂತೆ ಹರಕೆ ಹೊತ್ತ ಒಂದು ವರ್ಷದೊಳಗೆ ಮಾಳವ್ವ ಗರ್ಭಿಣಿಯಾಗಿ ಅವಳಿ ಹೆಣ್ಣು ಮಕ್ಕಳಿಗೆ ಜನ್ಮ ನೀಡಿದಳು. ಆ ಮಕ್ಕಳನ್ನು ಪ್ರೀತಿಯಿಂದ ದುರ್ಗಿ-ಮರ್ಗಿ ಎಂದು ಕರೆಯುತ್ತಿದ್ದರು.

ಮಕ್ಕಳಿಗಾಗಿ ದೇವರ ಬಳಿ ಹರಕೆ ಕಟ್ಟಿಕೊಳ್ಳುವಾಗ ಚೊಚ್ಚಿಲ ಹೆಣ್ಣು ಮಗಳನ್ನು ಜೋಗಣಿ ಬಿಡೋದು ಎಂದು ಬೇಡಿಕೊಂಡಿದ್ದರಿಂದ ಯಾವ ಮಗಳಿಗೆ ಜೋಗಣಿ ಬಿಡಬೇಕೆಂದು ಸಮಸ್ಯೆ ಎದುರಾಯಿತು. ಕೇರಿಯ ಪಂಚರು ಎರಡು ಮಕ್ಕಳು ಚೊಚ್ಚಿಲ ಮಕ್ಕಳೇ ಆದ್ದರಿಂದ ಇಬ್ಬರನ್ನೂ ದೇವಿ ಸೇವೆಗೆ ಬಿಡಬೇಕು ಎಂದು ನ್ಯಾಯ ನೀಡಿದರು. ಹೀಗಾಗಿ ಮೈನೆರೆದ ಒಂದು ವರ್ಷದಲ್ಲೇ ಮಾಪುರತಾಯಿ ಜಾತ್ರೆಯ ಸಂದರ್ಭದಲ್ಲಿ ಅವರಿಗೆ ರೀತಿರಿವಾಜಿನಿಂದ ದೇವರಿಗೆ ಜೋಗಣಿ ಬಿಡಲಾಯಿತು. ಬದುಕು ಎತ್ತ ಸಾಗುತ್ತಿದೆ ಎಂಬ

ಅರಿವಿಲ್ಲದ ದುರ್ಗಿ–ಮರ್ಗಿಯರು ಹೆಣ್ಣಾಗಿ ಹುಟ್ಟಿದ ತಪ್ಪಿಗೆ ದಿನೇ–ದಿನೇ ನರಳುವಂತಹ ಪರಿಸ್ಥಿತಿಯನ್ನು ಎದುರಿಸುವಂತಾಗುತ್ತದೆ. ದೇವರ ಹೆಸರಿನಲ್ಲಿ ಜೋಗಣಿ ಮಾಡಿ ಸೂಳೆಗಾರಿಕೆ ಧಂದೆಗೆ ಇವರನ್ನು ಇಳಿಸಿದ ಸಮಾಜದ ವಾಸ್ತವಿಕ ಚಿತ್ರಣವನ್ನು ಅತ್ಯಂತ ಮಾರ್ಮಿಕವಾಗಿ ಕಾದಂಬರಿ ಚಿತ್ರಿಸುತ್ತದೆ.

ಆರಂಭದಲ್ಲಿ ಹಣೆಬರಹವನ್ನು ಹಳಿದುಕೊಳ್ಳುತ್ತಿದ್ದ ದುರ್ಗಿ–ಮರ್ಗಿಯರು ಜೋಗಣಿ ದಂಧೆಯಲ್ಲಿ ಪಳಗಿದವರಾದರು. ಊರಿನ ಜನರಿಗೆ ಮನೋರಂಜನೆಯ ಜೊತೆಗೆ ಭೋಗದ ವಸ್ತುವಾಗಿಯೂ ಪ್ರಚಲಿತವಾಗಿದ್ದರು. ಗುಲ್ಬರ್ಗಾದ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ತಲೆಮಾರಿನಿಂದಲೂ ಜೋಗಣಿ ಪದ್ಧತಿ ಬೆಳೆದುಕೊಂಡು ಬಂದಿದೆ. ತಮ್ಮ ಮಕ್ಕಳನ್ನು ದೇವರ ಹೆಸರಿನಲ್ಲಿ ಸ್ವತಃ ತಾವೇ ಅನ್ಯ ಗಂಡಸರ ಮಗ್ಗುಲಿಗೆ ಕಳುಹಿಸಿ ಸೂಳೆಗಾರಿಕೆ ದಂಧೆಗೆ ಇಳಿಸುತ್ತಿದ್ದರು. ಹೀಗೆ ಒಮ್ಮೆ ಜೋಗಣಿ ಅಂತ ಆದವಳು ಸಾಯುವವರೆಗೂ ಜೋಗಣಿ ಆಗಿಯೇ ಉಳಿಯಬೇಕು. ಅವಳು ಮದುವೆಯಾಗುವಂತಿರಲಿಲ್ಲ. ಅವಳಿಗೆ ಹುಟ್ಟುವ ಮಕ್ಕಳಿಗೆ ತಂದೆಯ ಹೆಸರಿರುವುದಿಲ್ಲ. ಅವರಿಗೆ ತಾಯಿಯೊಬ್ಬಳೇ ನಿಜ. ಇಂಥ ಅನಿಷ್ಟ ಆಚರಣೆಗಳಿಂದ ಕೆಳವರ್ಗದ ಮಹಿಳೆಯರ ಬಾಳು ಸರ್ವನಾಶಗೊಳ್ಳುತ್ತಿದೆ.

ದುರ್ಗಿ–ಮರ್ಗಿಯರ ಪಾತ್ರಗಳ ಮೂಲಕ ಜೋಗಣಿಯರ ನೋವುಗಳನ್ನು ನಿರೂಪಿಸುತ್ತಾರೆ. ದುರ್ಗಿ–ಮರ್ಗಿಯರು ಚೌಡಿಕೆ ಬಾರಿಸುತ್ತ ಹಾಡು ಹಾಡಿದರೆ ಅವರ ಧ್ವನಿ ಗಂಡಸರ ತಲೆಗೆ ನಶೆ ಏರಿಸಿದ ಹಾಗೆ ಮಾಡುತ್ತಿತ್ತು. ಸುತ್ತ ಮುತ್ತಲಿನ ಜನ ಮಾತು ಮರೆತು ಮೂಕರಾಗುತ್ತಿದ್ದರು.

**"ಬನ್ನಿಗಿಡದ ಮಾಪುರಿ**
**ಬಯಲಾಗ ನಿನ್ ಜಾತರೀ**
**ಜೋಗಣಿ ಅಂತ ಬೈದವರ ಬಾಯಾಗ ಹುಳ ಬೀಳಸೀದಿ**
**ನೆತ್ತಿಮ್ಯಾಲೆ ಪರಡಿ ಹೊರಸಿ**
**ಗಲ್ಲಿ ಗಲ್ಲಿ ತಿರಗಿಸಿದೀ.....ಬನ್ನಿ ಗಿಡದ ಮಾಪುರೀ...**
**ನಿನ್ ಮೈಮಾ ನಾ ಯೇನು ಹಾಡಲೆವ್ವ**
**ಉಧೋ....ಉಧೋ....ಮಾಪುರೆವ್ವ...ಬನ್ನಿಗಿಡದಮಾಪುರಿ"[1]**

ಈ ರೀತಿ ಹಾಡಿನ ಮೂಲಕವಾಗಿಯೇ, ತಮ್ಮ ಹಾಗೂ ದೇವಿಯ ಮಹಿಮೆಯನ್ನು ಕುರಿತು ಹಾಡುವರು. ಈ ಜೋಗಣಿಯರ ಹಾಡಿಗೆ ಮನಸೋತು ಕೆಲವರು ಹಣವನ್ನು ನೀಡಿದರೆ, ಮತ್ತೆ ಕೆಲವರು ಅಂದಿನ ರಾತ್ರಿಯ ಊಟದ ವ್ಯವಸ್ಥೆ ಮಾಡಿಸುತ್ತಿದ್ದರು. ಇನ್ನು ಕೆಲವರು ಬಿಟ್ಟಿಯಾಗಿ ಸೇಂಧಿಯನ್ನು ಕುಡಿಸುತ್ತಿದ್ದರು. ಹೀಗೆ ದುರ್ಗಿ–ಮರ್ಗಿ ಜೋಗಿಣಿಯರ ಜೀವನ ಏನೂ ಬದಲಾವಣೆಗಳಿಲ್ಲದೆ ಸಾಗುತ್ತಿತ್ತು.

ಜೋಗಣಿಯ ಬಾಳನ್ನು ಮುಪ್ಪಿನವರೆಗೂ ಅನುಭವಿಸಿದವಳು ನಿಂಬೆವ್ವಾಯಿ. ಜಂಬಗಿ ಹಳ್ಳಿಯ ಮಾದರ ಪರಪ್ಪನ ಮಗಳು ತುಳಜಾಗೆ ನಿಂಬೆವ್ವಾಯಿ ಜೋಗಣಿ ಆಗುವುವವರ ಬಾಳು ಯಾವ ರೀತಿಯಿಂದ ಕೂಡಿದೆ ಎಂಬುದನ್ನು ತಿಳಿಸುತ್ತಾಳೆ. ಹರೆಯದ ದಿನಗಳಲ್ಲಿ ಜೋಗಣಿಯ ಬಾಳು ಮೋಜಿನಿಂದ ಕೂಡಿರುತ್ತದೆ. ಯಾವಾಗ ಅವಳ ಹರೆಯ ಕುಸಿಯ ತೊಡಗುತ್ತದೆಯೋ ಅವಾಗ ಅವಳ ಗುಡಿಸಲಿಗೆ ಬರುವ ಗಿರಾಕಿಗಳ ಸಂಖ್ಯೆ ಕಡಿಮೆಯಾಗಲಾರಂಭಿಸುತ್ತದೆ. ಪಟ್ಟಕ್ಕೆ ಹಾಕಿಕೊಂಡು ಅವಳ ಮೈಯ ಮೀಸಲನ್ನು ಮುರಿದ ಗಂಡಸರು ಅವಳ ಬದುಕಿಗೆ ಆಸ್ತಿ–ಪಾಸ್ತಿ ಮಾಡಿ ಆಸರೆ ಕೊಡುವುದಿಲ್ಲ. ತನ್ನ ಕಾಮದ ಆಸೆಯನ್ನು ತೀರಿಸಿದ ಹೆಣ್ಣು ಮಗಳ ಜವಾಬ್ದಾರಿಯೂ ಯಾರೂ ಹೊರುವುದಿಲ್ಲ. ಅವಳನ್ನು

ಖಾಯಂ ಆಗಿ ಇಟ್ಟುಕೊಳ್ಳುವುದೂ ಇಲ್ಲ. ಒಂದಿಷ್ಟು ಹಣ, ಒಡವೆ, ವಸ್ತ್ರ ಕೊಟ್ಟು ಅವಳ ಕನ್ಯತ್ವ ಕಳೆದು ತನ್ನ ಕಾಮದ ಆಸೆಗೆ ಹೆಣ್ಣೊಬ್ಬಳ ಬಾಳನ್ನು ಆಹುತಿ ತೆಗೆದುಕೊಳ್ಳುತ್ತಾರೆ. ಆ ಮೇಲೆ ಅವನು ಬಂದರೂ ಬಿಟ್ಟರೂ ಅದು ಅವನ ಇಚ್ಛೆ. ಆದರೆ ಅವನು ಬಂದಾಗ ಮಾತ್ರ ಇವಳು ಬೇರೆ ಗಿರಾಕಿಗಳನ್ನು ದೂರ ಸರಿಸಿ ಅವನನ್ನೇ ಕರೆದುಕೊಳ್ಳಬೇಕು.

ಜೋಗಣಿಯಾದಾಗ ಮೊದಮೊದಲು ಸುಖ ಎನಿಸುವ ಈ ದೇವಿಯ ಸೇವೆ ನಂತರ ಬೇಕಾಬಿಟ್ಟಿಯಾಗಿ, ಆ ಮೇಲೆ ಕಷ್ಟವಾಗಿ, ಕೊನೆಗೆ ಸಾಕು ಸಾಕಾಗಿ ಹೋಗುತ್ತದೆ. ಜೋಗಣಿಯಾದ ಹೆಂಗಸು ತಲೆಯ ಮೇಲೆ ದೇವಿಯ ಪರಡಿಯ ಅಗಲವಾದ ಬುಟ್ಟಿ ಹೊತ್ತುಕೊಂಡು, ಕೊರಳಲ್ಲಿ ಕವಡೆ ಸರ ಹಾಕಿಕೊಂಡು, ದೇವಿಯ ಪಾದದ ಬೆಳ್ಳಿ ಪದಕಗಳನ್ನು ಹಾಕಿಕೊಂಡು, ಬಗಲಲ್ಲಿ ಚೌಡಕಿ ಹಿಡಿದು ಬಾರಿಸುತ್ತ, ಹಾಡುತ್ತ, ಊರೂರು, ಗಲ್ಲಿಗಲ್ಲಿ, ಮನೆ ಮನೆ, ರಸ್ತೆ ರಸ್ತೆ ತಿರುಗುತ್ತ ಜೋಗದ ಹೆಸರಿನಲ್ಲಿ ಭಿಕ್ಷೆ ಬೇಡಬೇಕು. ಮಂದಿ ನೀಡುವ ಹಿಟ್ಟು, ಜೋಳ, ಅಕ್ಕಿ, ಚಿಲ್ಲರೆ ಹಣದಿಂದಲೇ ಇವಳ ಹೊಟ್ಟೆ ತುಂಬಿಸಬೇಕು.

ಹಗಲು ಈ ಗತಿಯಾದರೆ ರಾತ್ರಿಯದು ಬೇರೆಯೇ ಪರಿ. ಅಪ್ಪಟ ಸೂಳೆಗಾರಿಕೆಯೇ ದಂಧೆ ನಡೆಯುತ್ತದೆ. ಬಂದ ಗಂಡಸರಿಗೆ ಸೆರಗು ಒಡ್ಡಿ ಅವರಿಗೆ ಸುಖವನ್ನು ನೀಡಬೇಕು. ವಯಸ್ಸಾದ ನಂತರ ಈ ಜೋಗಣಿಯರ ಗತಿ ನಿರ್ಗತಿಯಾಗುತ್ತದೆ ಎಂದು ಜಂಬಗಿಯ ಮುದಿ ಜೋಗಣಿ ನಿಂಬೆವ್ವಾಯಿ ತುಳಜವ್ವಗೆ ಅಳುತ್ತಾ ಹೇಳುತ್ತಾಳೆ. "ನೀ ನಿಮ್ಮಪ್ಪನ ಮಾತಿಗಿ ಮಣಿದು ಜೋಗಣಿ ಆಗ ಬ್ಯಾಡ ಪೋರೀ...ಇಸಾ ತಗೊಂಡು ಸಾಯದು ಬೇಕು. ಅದರ ಈ ಜೋಗಣಿ ಆಗಾದು ಬ್ಯಾಡವೋ"[2] ಎಂದು ಕಣ್ಣೀರು ಹಾಕುತ್ತಾಳೆ. ತನ್ನ ರೀತಿಯಲ್ಲಿ ಮತ್ತೊಬ್ಬ ಹೆಣ್ಣು ಮಗಳ ಬದುಕು ಹಾಳಾಗಬಾರದು ಎಂಬ ಕಾಳಜಿ ನಿಂಬೆವ್ವಾಯಿಯದು.

ತುಳಜಾ ಮಾಪುರ ತಾಯಿಯ ಇಚ್ಛೆಯ ಮೇರೆಗೆ ತಾಯಿಯ ಸೇವೆ ಮಾಡಲು ನಿಂತವಳು. ನಿಂಬೆವ್ವಾಯಿಯನ್ನು ಮಾತನ್ನು ಕೇಳಿ ಆಶ್ಚರ್ಯಗೊಳ್ಳುತ್ತಾಳೆ ತುಳಜಾ. ನಿಂಬೆವ್ವಾಯಿ ತಾಯಿ ಮಕ್ಕಳನ್ನು ಮರ್ಯಾದೆ ಬಿಟ್ಟು ಸೂಳೆಗಾರಿಕೆ ದಂಧೆ ಮಾಡಿಕೊಂಡು ತಿರುಗು ಎಂದು ಹೇಳುವುದಿಲ್ಲ, ಬದಲಿಗೆ ಮದುವೆ ಮಾಡಿಕೊಂಡು ಗರತಿಯಾಗಿ ಜೀವನ ಮಾಡು ಎಂದು ಹೇಳುತ್ತಾಳೆ. ಯಾವ ದೇವರು ಕೂಡ ಹೆಣ್ಣು ಮಕ್ಕಳನ್ನು ಜೋಗಣಿಯಾಗು ಎಂದು ಎಂದು ಹೇಳುವುದಿಲ್ಲ. ದೇವರು ಹೆಣ್ಣು ಮಕ್ಕಳನ್ನು ಜೋಗಣಿಯಾಗಬೇಕೆಂದು ಹೇಳುವುದು ನಿಜವಾಗಿದ್ದರೆ, ಮೇಲ್ಜಾತಿಯ ಹೆಂಗಸರು ಯಾರು ಜೋಗಣಿಯಾಗಿದ್ದಾರೆ? ಕೆಳಜಾತಿಯ ಹೆಂಗಸರ ಜೋಗಣಿಯರಾಗಿ ಎಂದು ದೇವರು ಹೇಳುತ್ತಾರೆಯೋ? ಎಂದು ನಿಂಬೆವ್ವಾಯಿ ತುಳಜಾಳನ್ನು ಪ್ರಶ್ನೆ ಕೇಳುತ್ತಾಳೆ.

ತುಳಜಾ ದೇವದಾಸಿ ಪದ್ದತಿಗೆ ಬರಲು ಪೂಜಾರಪ್ಪನ ಕಿತಾಪತಿಯೇ ಕಾರಣವಾಗಿರುತ್ತದೆ. ಪೂಜಾರಪ್ಪ ಊರ ಗೌಡ, ಕುಕ್ಕಣಿ, ಶೆಟ್ಟಿ ಸಾವ್ಕಾರರ ಚಾಕರಿ ಕೆಲಸ ಮಾಡುತ್ತಾನೆ. ಅವರು ಕೊಡುವ ಸಿಂದಿಗೆ(ಸೇಂದಿಗೆ) ಆಸೆ ಪಟ್ಟು ಅವರು ಹೇಳಿದಂತೆ ಕುಣಿಯುತ್ತಾನೆ. ಪೂಜಾರಪ್ಪನ ಮೈ ಮೇಲೆ ದೇವಿ ಬರುತ್ತಾಳೆ ಎಂದು ಮೈ ತೂಗಿಸುತ್ತ ಆ ಗೌಡ, ಕುಲಕರ್ಣಿಯರು ಹೇಳಿಕೊಟ್ಟಂತೆ ಕೇರಿಯ ಸುಂದರ ಹುಡುಗಿಯರನ್ನು ಜೋಗಣಿಯರಾಗಲು ದೇವರ ಹೆಸರಿನಲ್ಲಿ ಹೇಳಿಕೆ ನೀಡುತ್ತಾನೆ. ರಾಕ್ಷಸರ ಮಾತುಗಳಿಗೆ ನಾನು ಕೂಡ ಬಲಿಯಾಗಿದ್ದೇನೆ. ನೀನು ಈ ಜೋಗಣಿ ಎಂಬ ಬಲೆಗೆ ಬೀಳಬೇಡ, ಜೋಗಣಿ ಅಗಬೇಡ ಎಂದು ನಿಂಬೆವ್ವಾಯಿ ತುಳಜಾಗೆ ಹೇಳಿದಳು. ಹಾಗೆಯೇ ತಾನು ಹೇಳಿದ ಈ ಗುಟ್ಟನ್ನು ಯಾರಿಗೂ ಹೇಳದೆ ತನ್ನ ಪ್ರಾಣ ಉಳಿಸುವಂತೆ ನಿಂಬೆವ್ವಾಯಿ ತುಳಜಾಗೆ

ಕೇಳಿಕೊಳ್ಳುತ್ತಾಳೆ.

ಆದರೆ ತುಳಜಾ ಚುಂಚೂರು ಮಾಪುರ ದೇವಿಗೆ ಹರಕೆಯ ಬಲಿಯಾಗಿ ಜೋಗಣಿಯಾಗುತ್ತಾಳೆ. ಆರೆಂಟು ತಿಂಗಳಾದರೂ ಆಕೆ ಜೋಗಣಿಯ ಬದುಕು ನಿರ್ವಹಿಸಲಾಗದೆ ವಿಲವಿಲ ಒದ್ದಾಡುತ್ತಾಳೆ. ಒಂದು ದಿನ ಕಲಬುರ್ಗಿಯ ಸಂತೆಗೆ ಹೋದಾಗ ತುಳಜಾ ಕುಣಿಯುತ್ತ ದೇವಿಯ ಹಾಡು ಹಾಡುತ್ತಿದ್ದಾಗ, ಅವಳ ಧ್ವನಿ, ಸೌಂದರ್ಯಕ್ಕೆ ಹುಸನಪ್ಪ ಮರಳಾಗುತ್ತಾನೆ. ಆಕೆ ಜೋಗಣಿಯಾಗಿದ್ದರೂ ಅವಳನ್ನು ಮದುವೆಯಾಗುವುದಾಗಿ ಆಸೆಯನ್ನು ವ್ಯಕ್ತಪಡಿಸುತ್ತಾನೆ. ತಂದೆತಾಯಿಯಿಲ್ಲದೆ ಅನಾಥನಾಗಿದ್ದ ಹುಸನಪ್ಪ ಆರು ವರ್ಷಗಳ ಹಿಂದೆ ಮುಂಬೈಗೆ ಹೋಗಿ ಅಲ್ಲಿ ಮನೆ ಕಟ್ಟುವ ಕೆಲಸದಲ್ಲಿ ಮೇಸ್ತ್ರಿಗಳ ಕೈಕೆಳಗೆ ಕೆಲಸ, ಮಾಡುತ್ತಿದ್ದನು. ವರ್ಷಕ್ಕೊಮ್ಮೆ ತನ್ನ ಊರಿಗೆ ಬಂದು ಹೋಗುತ್ತಿದ್ದನು. ಹಾಗೆ ಊರಿಗೆ ಬಂದಾಗ ತುಳಜಾಳನ್ನು ಮೆಚ್ಚಿಕೊಂಡು ಮದುವೆಯಾಗುವ ಬಯಕೆಯನ್ನು ತಿಳಿಸುತ್ತಾನೆ.

ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಹುಸನಪ್ಪನ ತಂದೆ–ತಾಯಿ ಏನಾದರೂ ಬದುಕಿದ್ದರೆ ಜೋಗಣಿಯಾದ ತುಳಜಾಳನ್ನು ವಿವಾಹವಾಗಲು ಒಪ್ಪುತ್ತಿದ್ದರೆ ಎಂಬ ಪ್ರಶ್ನೆ ನಮ್ಮನ್ನು ಕಾಡುತ್ತದೆ. ಆದರೂ ವೈಚಾರಿಕ ನಿಲುವನ್ನು ಹೊಂದಿದ ಹುಸನಪ್ಪನ ಧೈರ್ಯ ಮೆಚ್ಚುವಂತಹುದು. ಜೋಗಣಿಯಾದ ಹೆಣ್ಣನ್ನು ಪಾಪಕೂಪದಿಂದ ಹೊರತಂದು ಅವಳನ್ನು ಮದುವೆಯಾಗಿ ಹೊಸ ಬಾಳು ನೀಡುವುದು ಶ್ಲಾಘನೀಯ ಎನಿಸುತ್ತದೆ. ತುಳಜಾ ಹುಸನಪ್ಪನನ್ನು ವಿವಾಹವಾಗಿ ಒಂದು ಹೊಸ ಜಗತ್ತಿಗೆ ಪಾದಾರ್ಪಣೆ ಮಾಡುತ್ತಾಳೆ. ತುಳಜಾ ಜೋಗಣಿಯಾಗಿದ್ದನ್ನು ಬಿಟ್ಟು ಗರತಿಯಾಗಿದ್ದ ವಿಷಯವನ್ನು ತಿಳಿದ ದೈವದವರು ತುಳಜಾನ ಕುಟುಂಬಕ್ಕೆ ದಂಡ ವಿಧಿಸಿ ಕೇರಿಯಿಂದ, ಕುಲದಿಂದ ಹೊರಗಿಡುವ ತೀರ್ಪು ನೀಡುತ್ತಾರೆ.

ಆದರೆ ತುಳಜಾ ಇಡೀ ದೈವದವರ ನಿರ್ಣಯವನ್ನು ಧಿಕ್ಕರಿಸಿ ತನ್ನ ತಂದೆ–ತಾಯಿಯನ್ನು ತನ್ನೊಡನೆ ಮುಂಬೈಗೆ ಕರೆದುಕೊಂಡು ಹೋಗುವ ದಿಟ್ಟ ನಿಲುವನ್ನು ತೋರಿಸುತ್ತಾಳೆ. "ತನಗೆ ಇದು ತಪ್ಪು, ಅನ್ಯಾಯ ಅನಿಸಿದ್ದನ್ನು ವ್ಯಕ್ತ ಮಾಡುವುದೇ ಪ್ರತಿಭಟನೆ"[3] ತುಳಜಾ ಪಂಚಾಯಿತಿಯ ವಿರುದ್ಧ ಆಡಿದ ಮಾತುಗಳು, ಪ್ರತಿಭಟಿಸಿದ ರೀತಿ, ತೋರಿಸಿದ ಧೈರ್ಯ ಸಮಾಜದಲ್ಲಿ ಶೋಷಣೆಗೆ ಒಳಗಾಗುತ್ತಿರುವ ಸ್ತ್ರೀಯರಿಗೆ ಮಾದರಿ ಎನಿಸುತ್ತದೆ.

ತುಳಜಾಳ ಹಾದಿಯನ್ನೇ ಅನುಸರಿಸಿದ ನೀಲವ್ವ ಕೂಡ ಜೋಗಣಿ ಆಗುವುದಿಲ್ಲವೆಂದು ಪ್ರತಿಭಟನೆ ಮಾಡುವುದು ಕಾದಂಬರಿಯ ಮುಖ್ಯ ಭಾಗ ಎನಿಸುತ್ತದೆ. ಆದರೆ ನೀಲವ್ವನ ಪ್ರತಿಭಟನೆಯ ಧ್ವನಿಗೆ ನ್ಯಾಯ ದೊರೆಯುವುದಿಲ್ಲ. ಸಮಾಜದ ಅನಿಷ್ಟ ನಿಯಮದ ವಿರುದ್ಧ ಹೋರಾಡಿ ಕೊನೆಗೆ ಜೋಗಣಿಯಾಗುದಿಲ್ಲವೆಂದು ಆತ್ಮಹತ್ಯೆಯ ದಾರಿ ಹಿಡಿಯುತ್ತಾಳೆ. ಮೇಲ್ವರ್ಗದವರ ಹಿಂಸೆಗೆ, ಕ್ರೌರ್ಯಕ್ಕೆ, ಶೋಷಣೆಗೆ ಬಲಿಯಾಗುವ ಹೆಣ್ಣು ಮಕ್ಕಳಲ್ಲಿ ನೀಲವ್ವ, ತುಳಜಾರ ಪಾತ್ರಗಳ ಪ್ರತಿಭಟನೆ ಓದುಗರ ಮೇಲೆ ತೀವ್ರ ಪ್ರಭಾವ ಬೀರುತ್ತದೆ.

ಈ ರೀತಿಯಾಗಿ ದೇವರ ಹೆಸರಿನಲ್ಲಿ ಮಹಿಳೆಯರನ್ನು ಜೋಗಣಿಯರನ್ನಾಗಿ ಮಾಡಿ ಸೂಳೆಗಾರಿಕೆ ದಂಧೆಗೆ ಇಳಿಸುತ್ತಿದ್ದ ಸಮಾಜದ ಚಿತ್ರಣವನ್ನು ಅತ್ಯಂತ ಮಾರ್ಮಿಕವಾಗಿ ಗೀತಾ ನಾಗಭೂಷಣ ಅವರು 'ಬದುಕು' ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಈ ಜೋಗಣಿ ದಂಧೆಯಿಂದ ಹೊರಬರಲು ತುಳಜಾ ಹೋರಾಟಕ್ಕಿಳಿದು ಜಯವನ್ನು ಸಾಧಿಸಿದರೆ, ಪ್ರತಿಭಟಿಸಿ ಅಪಜಯವನ್ನು ಕಂಡು ನೀಲವ್ವ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾಳೆ. ಎರಡೂ ಪಾತ್ರಗಳು

ಓದುಗರ ಮನದಲ್ಲಿ ಸ್ಥಾನ ಪಡೆಯುತ್ತವೆ.

**ಉಪಸಂಹಾರ:**

ಅನಾದಿ ಕಾಲದಿಂದಲೂ ಕೆಳವರ್ಗ ಮತ್ತು ದಲಿತ ಮಹಿಳೆಯರ ಮೇಲೆ ಸಂಪ್ರದಾಯದ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ ನಿರಂತರವಾಗಿ ಶೋಷಣೆ ನಡೆಯುತ್ತಾ ಬಂದಿದೆ. ಈ ಶೋಷಣೆಯ ವಿರುದ್ಧ ಸಿಡಿದೆದ್ದ ದಿಟ್ಟ ಮಹಿಳೆ ಗೀತಾ ನಾಗಭೂಷಣ ಅವರು. ಈ ಅನಿಷ್ಟ ಪದ್ಧತಿಗೆ ಕೆಳವರ್ಗದ ಮುಗ್ಧ ಮಹಿಳೆಯರು ಬಲಿಪಶುಗಳಾಗುತ್ತಿದ್ದಾರೆ. ಇಂದಿಗೂ ಶಿವಮೊಗ್ಗ ಜಿಲ್ಲೆಯ ಚಂದ್ರಗುತ್ತಿಯಲ್ಲಿ, ಸವದತ್ತಿಯಲ್ಲಿ ಈ ದೇವದಾಸಿ ಪದ್ಧತಿ ಆಚರಣೆಯಲಿರುವುದು ತಿಳಿದುಬರುತ್ತದೆ. ಈ ಎರಡೂ ಪ್ರದೇಶಗಳಲ್ಲಿ ಮಾತ್ರವಲ್ಲದೆ, ಇನ್ನೂ ಅನೇಕ ಪ್ರದೇಶದಲ್ಲಿ ಈ ಅನಿಷ್ಟ ಪದ್ಧತಿ ರೂಢಿಯಲ್ಲಿದೆ. ಮನೆಯ ಹಿರಿಯ ಮಗಳನ್ನು ದೇವದಾಸಿಯಾಗಿ ಬಿಡದಿದ್ದರೆ ವಂಶೋದ್ಧಾರವಾಗುವುದಿಲ್ಲ ಎಂಬ ಮೂಢನಂಬಿಕೆ ಜನಸಾಮಾನ್ಯರಲ್ಲಿ ಗಾಢವಾಗಿ ಬೇರೂರಿದೆ.

ಮೇಲ್ವರ್ಗದವರ ಲಾಲಸೆಗೆ ಕೆಳವರ್ಗದ ಮಹಿಳೆಯರು ಭೋಗದ ವಸ್ತುವಾಗಿದ್ದಾರೆ. ದೇವರ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ ಮಹಿಳೆಯರನ್ನು ವೇಶ್ಯಾವಾಟಿಕೆಗೆ ತಳ್ಳುವಂತಹ ಸಮಾಜದ ಕರಾಳ ಮುಖವನ್ನು ಲೇಖಕಿ 'ಬದುಕು' ಕಾದಂಬರಿಯಲ್ಲಿ ಅನಾವರಣಗೊಳಿಸಿದ್ದಾರೆ. ಕಾದಂಬರಿಯಲ್ಲಿ ದೇವದಾಸಿಯರ ಪಾತ್ರ ಚಿತ್ರಣವು ಸಮಾಜದ ಒಂದು ಕ್ರೂರ ಮತ್ತು ಮೌನವಾಗಿ ಮುಂದುವರಿದ ಅನ್ಯಾಯದ ವ್ಯವಸ್ಥೆಯನ್ನು ಬಯಲಿಗೆಳೆಯುತ್ತದೆ. ದೇವದಾಸಿಯರನ್ನು ಕೇವಲ ಸಂಪ್ರದಾಯದ ಭಾಗವೆಂದು ಅಲ್ಲ, ಬದಲಾಗಿ ಶೋಷಣೆಗೆ ಒಳಗಾದ ಮಾನವೀಯ ಜೀವಿಗಳೆಂದು ಲೇಖಕಿ ಚಿತ್ರಿಸುತ್ತಾರೆ. ಅವರ ಬದುಕಿನ ನೋವು, ಅಸಹಾಯಕತೆ, ದೈಹಿಕ–ಮಾನಸಿಕ ಶೋಷಣೆ ಮತ್ತು ಸಾಮಾಜಿಕ ನಿರ್ಲಕ್ಷ್ಯಗಳ ಮೂಲಕ ಹೆಣ್ಣಿನ ಮೇಲೆ ಸಮಾಜ ಹೇರುವ ಬಂಧನಗಳು ಸ್ಪಷ್ಟವಾಗುತ್ತವೆ.

"ದಿನಕ್ಕೊಮ್ಮೆ ಹುಟ್ಟು ದಿನಕ್ಕೊಮ್ಮೆ ಸಾವು ಅನ್ನೋಹಂಗ ಸೂರ್ಯ ಚಂದ್ರಾಮರು ಹುಟ್ಟುತ್ತಿದ್ದರು...ಸಾಯುತ್ತಿದ್ದರು. ಹಿಂಗೇ ಹುಟ್ಟು ಸಾವುಗಳ ಕೈ ಹಿಡಿದುಕೊಂಡೇ ಮಂದಿಯ ಬದುಕು ಮುಂದೆ ಮುಂದೆ ನಡೆಯುತ್ತಿತ್ತು. ಎಲ್ಲಿಗೆ ಹೋಗಿ ತಲುಪಬೇಕು ಅನ್ನುವ ಗುರಿ ಗೊತ್ತಿರಲಿಲ್ಲವಾದರೂ ನಡೆಯುವುದೊಂದೇ ತನ್ನ ಗುರಿಯೆನ್ನುವಂತೆ ಹೊತ್ತು ನಡೆಯುತ್ತಲೇ ಇತ್ತು ತನ್ನದೇ ಗತಿಯಿಂದ !"[4] ದೇವದಾಸಿಯರಿಗೆ ಬದುಕುವ ದಾರಿಯನ್ನು ಕಾದಂಬರಿಯ ಮೂಲಕ ತೋರಿಸಿದ ಧೀಮಂತ ಮಹಿಳೆ ಗೀತಾ ನಾಗಭೂಷಣ ಅವರು. ಕಾದಂಬರಿಯ ಪಾತ್ರಗಳ ಮೂಲಕ ಗೀತಾ ನಾಗಭೂಷಣ ಅವರು ದೇವದಾಸಿ ಪದ್ಧತಿಯ ಅಮಾನುಷತೆಯನ್ನು ಪ್ರಶ್ನಿಸಿ, ಹೆಣ್ಣಿನ ಗೌರವ, ಸ್ವಾತಂತ್ರ್ಯ ಮತ್ತು ಬದುಕಿನ ಹಕ್ಕಿನ ಬಗ್ಗೆ ಗಂಭೀರ ಚಿಂತನೆಗೆ ಓದುಗರನ್ನು ಕರೆದೊಯ್ಯುತ್ತಾರೆ. ಆದ್ದರಿಂದ 'ಬದುಕು' ಕಾದಂಬರಿಯಲ್ಲಿ ದೇವದಾಸಿಯರ ಪಾತ್ರ ಚಿತ್ರಣವು ಕೇವಲ ಕಥನಾತ್ಮಕ ಅಂಶವಾಗದೆ, ಸಾಮಾಜಿಕ ಜಾಗೃತಿಯ ದಿಟ್ಟ ಘೋಷಣೆಯಾಗಿ ಕಾಣಿಸುತ್ತದೆ.

## ಕೊನೆ ಟಿಪ್ಪಣಿಗಳು:

1. ಗೀತಾ ನಾಗಭೂಷಣ, (2003), ಬದುಕು, ಬೆಂಗಳೂರು: ಸಪ್ನ ಬುಕ್ ಹೌಸ್, ಪು.ಸಂ. 225
2. ಅದೇ, ಪು.ಸಂ 229
3. ಸಾದರ ಬಸವರಾಜ (ಸಂ), ಮೇಘ ಮಂದಾರ, ಲೇ. ಪ್ರತಿಭಟನೆ, ಪು.ಸಂ. 49
4. ಗೀತಾ ನಾಗಭೂಷಣ, (2003), ಬದುಕು, ಬೆಂಗಳೂರು: ಸಪ್ನ ಬುಕ್ ಹೌಸ್, ಪು.ಸಂ. 517

## ಪರಾಮರ್ಶನ ಗ್ರಂಥಗಳು:

1. ಗೀತಾ ನಾಗಭೂಷಣ, (2003), ಬದುಕು, ಬೆಂಗಳೂರು: ಸಪ್ನ ಬುಕ್ ಹೌಸ್.
2. ಚೆನ್ನಣ್ಣ ವಾಲಿಕಾರ, (2001), ಕರ್ನಾಟಕದ ದೇವದಾಸಿ ಪದ್ಧತಿ: ಸಮಾಜ–ಧಾರ್ಮಿಕ–ಆರ್ಥಿಕ–ಶೈಕ್ಷಣಿಕ–ಸಾಂಸ್ಕೃತಿಕ ಮತ್ತು ರಾಜಕೀಯ ಸಮಸ್ಯೆಗಳ ಅಧ್ಯಯನ, ಮೈಸೂರು: ಗೀತಾ ಬುಕ್ ಹೌಸ್.
3. ಜೋಗನ್ ಶಂಕರ್, (1993), ದೇವದಾಸಿ ಸಂಪ್ರದಾಯ, ಅಥಣಿ: ವಿಮೋಚನಾ ಪಬ್ಲಿಕೇಷನ್ಸ್.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.